**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**

**ಸಿ.ಸಿ ನಂಬರ್ 36/2022**

ಫಿರ್ಯಾದಿದಾರರು    ಸರಕಾರ (ಹಾವೇರಿ ಶಹರ  ಪೊಲೀಸ ಠಾಣೆ ).

ವಿರುದ್ಧ

ಆರೋಪಿ    ಪ್ರವೀಣ ತಂದೆ ಯಲ್ಲಪ್ಪ ಕಾಳಿ

ವಯಾಃ 19 ವರ್ಷ, ಉದ್ಯೋಗಃ ಚಾಲಕ

ಸಾಃ  ಹೊಸಮೇಲ್ಮುರಿ ತಾಃ ಜಿಃ ಹಾವೇರಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ-1    ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ-2    ಫ್ರಾಸಾ-1    ಪುಟ್ಟವ್ವ  ತಂದೆ ಅಶೋಕ ಮಡಿವಾಳರ ಇವರು ತಮ್ಮ ಸಾಕ್ಷಿಯಲ್ಲಿ  ನನಗೆ ಚಾ.ಸಾ-2 ರಿಂದ 6 ಮತ್ತು 14 ರವರ ಪರಿಚಯ ಇರುತ್ತದೆ. ಚಾ.ಸಾ-9 ನನ್ನ ಗಂಡನಾಗಬೇಕು. ಚಾ.ಸಾ-10 ನನ್ನ ಅಕ್ಕನಾಗಬೇಕು. ಚಾ.ಸಾ-11 ನನ್ನ ಮಾವನಾಗಬೇಕು. ಚಾ.ಸಾ-12 ಮತ್ತು 13 ಇವರ ಪರಿಚಯ ಇರುತ್ತದೆ. ನನ್ನ ಮೃತ ತಾಯಿಯ ಹೆಸರು ಸರಸ್ವತೆವ್ವ ಅಂತಾ ಇರುತ್ತದೆ. ನನ್ನ ತಾಯಿಗೆ ಅಪಘಾತವು 5 ವರ್ಷದ ಹಿಂದೆ ಆಗಿರುತ್ತದೆ. ನನ್ನ ತಾಯಿಗೆ ಅಪಘಾತವಾದಾಗ ಸಂಜೆ 4-30 ರಿಂದ 5-00 ಘಂಟೆ ಸಮಯ ಆಗಿರುತ್ತದೆ. ಆ ಸಮಯದದಲ್ಲಿ ನಾನು ನನ್ನ ಗಂಡನ ಮನೆಯಾದ ಸುರಣಗಿ ಗ್ರಾಮದಲ್ಲಿ ಇದ್ದೇವು. ಅಪಘಾತವಾದ ಸ್ಥಳದಿಂದ ನನ್ನ ಗಂಡನ ಮನೆಯು 30 ಕಿ.ಮೀ ದೂರದಲ್ಲಿ ಇರುತ್ತದೆ. ಅಪಘಾತದ ಬಗ್ಗೆ ನನಗೆ ಚಾ.ಸಾ-

12 ಶಿವಬಸಪ್ಪ ಇವರು ತಿಳಿಸಿರುತ್ತಾರೆ. ನಮ್ಮ ತಾಯಿಯು ಹೊಸಮೇಲ್ಮುರಿ ಗ್ರಾಮದಿಂದ ಹಳೇಮೇಲ್ಮುರಿ ಗ್ರಾಮಕ್ಕೆ ನಡೆದುಕೊಂಡು ಬರುವಾಗ ಅಪಘಾತ ಆಗಿರುತ್ತದೆ. ಅಪಘಾತಪಡಿಸಿದ ವಾಹನವು ಹಳೆಯ ಮೇಲ್ಮುರಿ ಗ್ರಾಮದ ಕಡೆಯಿಂದ ಹೊಸಮೇಲ್ಮುರಿ ಗ್ರಾಮದ ಕಡೆಗೆ ಬರುತ್ತಿತ್ತು. ಅಪಘಾತವಾದ ಸಮಯದಲ್ಲಿ ಅಪಘಾತಪಡಿಸಿದ ವಾಹನವು ಅತೀ ವೇಗವಾಗಿ ಬರುತ್ತಿತ್ತು ಎಂದು ನನಗೆ ತಿಳಿಸಿರುತ್ತಾರೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ–3 ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಅಪಘಾತವಾದ ನಂತರವು ನಮ್ಮ ತಾಯಿಗೆ ಹೊಸರಿತ್ತಿ ಗ್ರಾಮದಲ್ಲಿ ಇರುವಂತಹ ಕಲ್ಲಿವಾಳಮಠ ಇವರ ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ನಮ್ಮ ತಾಯಿಗೆ ಚಾ.ಸಾ–12 ಇವರು ಆಸ್ಪತ್ರೆಗೆ ಅಪಘಾತವಾದ ವಾಹನದಲ್ಲಿ ಕರೆದುಕೊಂಡು ಬಂದಿದ್ದರು ಎಂದು ನನಗೆ ತಿಳಿದು ಬಂದಿರುತ್ತದೆ. ಸದರಿ ಆಸ್ಪತ್ರೆಗೆ ಬಂದು ನೋಡಿದಾಗ ನನ್ನ ತಾಯಿಗೆ ತಲೆಗೆ ಪೆಟ್ಟಾಗಿ ಆಕೆ ಮೃತಪಟ್ಟಿದ್ದಳು. ನಂತರ ನನ್ನ ತಾಯಿಯ ಶವವನ್ನು ತೆಗೆದುಕೊಂಡು ಗುತ್ತಲಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಗುತ್ತಲ ಪೊಲೀಸ ಠಾಣೆಗೆ ಹೋಗಿ ಅಪಘಾತದ ಕುರಿತಂತೆ ನಾನು ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ಸದರಿ ಪಿರ್ಯಾದಿಯನ್ನು ಕೊಡಲು ಚಾ.ಸಾ–12 ಶಿವಬಸಪ್ಪ ಇವರಿಂದ ಮಾಹಿತಿಯನ್ನು ತೆಗೆದುಕೊಂಡಿರುತ್ತೇನೆ. ಸದರಿ ಪಿರ್ಯಾದಿಯನ್ನು ಚಾ.ಸಾ–14 ನಮ್ಮ ಅಣ್ಣನಾದ ಪರಸಣ್ಣ ಈತನು ಬರೆದಿರುತ್ತಾನೆ. ನಂತರ ಸದರಿ ಪಿರ್ಯಾದಿಗೆ ನನ್ನ ಹೆಬ್ಬೆಟ್ಟಿನ ಗುರುತಿನ ಸಹಿ ಮಾಡಿದ್ದೇನೆ. ನಮ್ಮ ತಾಯಿಗೆ ಅಪಘಾತಪಡಿಸಿದ ವಾಹನ ಗೂಡ್ಸ ವಾಹನ ಆಗಿರುತ್ತದೆ,

ಅದರ ನಂಬರ ನನಗೆ ಹೇಳಲು ಬರುವದಿಲ್ಲ. ಸದರಿ ವಾಹನವನ್ನು ಮೊದಲನೇ ಬಾರಿಗೆ ಹೊಸರಿತ್ತಿ ಆಸ್ಪತ್ರೆಯ ಹೊರಗಡೆ ನೋಡಿರುತ್ತೇನೆ. ಸದರಿ ಗೂಡ್ಸ ವಾಹನವನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಪ್ರವೀಣ ಕಾಳೆ ಎಂದು ಗೊತ್ತಾಗಿರುತ್ತದೆ. ಆ ವ್ಯಕ್ತಿಯನ್ನು ನಾನು ಹೊಸರಿತ್ತಿಯ ಆಸ್ಪತ್ರೆಯಲ್ಲಿ ನೋಡಿದ್ದೇನೆ. ಪ್ರವೀಣ ಕಾಳೆ ಈತನನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಮ್ಮ ತಾಯಿಯ ಸಾವಿಗೆ ಪ್ರವೀಣ ಕಾಳೆ ಈತನು ಕಾರಣನಾಗಿರುತ್ತಾನೆ. ನಮ್ಮ ತಾಯಿಗೆ ಅಪಘಾತಪಡಿಸಿದ ಗೂಡ್ಸ ವಾಹನದ ಪೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಎರಡು ಪೋಟೋಗಳನ್ನು ಗುರುತಿಸಬಲ್ಲೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ-4 ಫ್ರಾಸಾ-4 ಶ್ರೀಮತಿ ನಾಗಮ್ಮ.ಕೆ ಗಂಡ ವಿಶ್ವನಾಥ ಸಿ.ಪಿ.ಐ ಭದ್ರಾವತಿ ನಗರ ವೃತ್ತ ಭದ್ರಾವತಿ ಇವರು ತಮ್ಮ ಸಾಕ್ಷಿಯಲ್ಲಿನಾನು ದಿನಾಂಕಃ 13.08.2020 ರಿಂದ ದಿನಾಂಕಃ 04.08.2023 ರವರೆಗೆ ಹಾವೇರಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಸಿ.ಪಿ.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 30.04.2021 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ-17 ರವರಿಂದ ಪಡೆದುಕೊಂಡಿದ್ದು, ಅದುವರೆಗಿನ ತನಿಖೆಯನ್ನು ಪರಿಶೀಲನೆ ಮಾಡಿರುತೆತೇನೆ. ನಾನು ಅನ್ಯ ಕರ್ತವ್ಯದ ಮೇಲೆ ಇದ್ದಾಗ ಮೃತ ಸರಸ್ವತೆವ್ವರವರ ಶವಪಂಚನಾಮೆ ಮಾಡುವಂತೆ ಚಾ.ಸಾ-17 ರವರಿಗೆ ಮೌಖಿಕ ಆದೇಶ ನೀಡಿರುತ್ತೇನೆ. ಅದೇ ದಿನ ಅಪಘಾತವಾದ ಸ್ಥಳಕ್ಕೆ ಬೇಟಿ

ನೀಡಿದ್ದು, ಚಾ.ಸಾ–13 ರವರು ತೋರಿಸಿದ ಸ್ಥಳದಲ್ಲಿ ಚಾ.ಸಾ–5 ಮತ್ತು 6 ರವರ ಸಮಕ್ಷಮ ಮದ್ಯಾಹ್ನ 1–00 ರಿಂದ 2–00 ಘಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, ಎರಡು ಫೋಟೋಗಳನ್ನು ತೆಗೆಯಿಸಿರುತ್ತೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ–5 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಅದೇ ದಿನ ಗುತ್ತಲ ಪೊಲೀಸ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ಗೂಡ್ಸ ವಾಹನವನ್ನು ಚಾ.ಸಾ–7 ಮತ್ತು 8 ರವರ ಸಮಕ್ಷಮ ಮದ್ಯಾಹ್ನ 2–45 ರಿಂದ 3–45 ರವರೆಗೆ ಜಪ್ತು ಪಂಚನಾಮೆಯನ್ನು ಜರುಗಿಸಿ ಎರಡು ಫೋಟೋಗಳನ್ನು ತೆಗೆಯಿಸಿದ್ದೇನೆ. ಚಾ.ಸಾ–1 ರವರ ಮರುಹೇಳಿಕೆ, ಚಾ.ಸಾ–9 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 11.05.2021 ರಂದು ಚಾ.ಸಾ–16 ರವರಿಗೆ ಈ ಪ್ರಕರಣದಲ್ಲಿ ಜಪ್ತು ಮಾಡಿಕೊಂಡ ಒಂದು ವಾಹನದ ಮೋಟಾರ ವಾಹನ ನಿರೀಕ್ಷಣೆಯನ್ನು ಮಾಡಿ ಅದರ ಪ್ರಕಾರ ವರದಿಯನ್ನು ಸಲ್ಲಿಸಲು ಮನವಿ ಪತ್ರ ಸಲ್ಲಿಸಿದ್ದೇನೆ. 2 ನೇ ಆರೋಪಿಗೆ ಐ.ಎಂ.ವಿ ನೋಟಿಸನ್ನು ನೀಡಿ ಉತ್ತರ ಪಡೆದುಕೊಂಡಿದ್ದೇನೆ. ಚಾ.ಸಾ–15 ರವರಿಂದ ಪಿ.ಎಂ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿನಾಂಕಃ 12.05.2021 ರಂದು ಅಪಘಾತಪಡಿಸಿದ ವಾಹನದ ಮಾಲೀಕರಾದ 2 ನೇ

ಆರೋಪಿಯಿಂದ ಇಂಡೆಮ್ನಿಟಿ ಬಾಂಡ ಪಡೆದು ಅವರ ಮಧ್ಯಂತರ ವಶಕ್ಕೆ ವಾಹನವನ್ನು ಬಿಡುಗಡೆ ಮಾಡಿದ್ದೇನೆ. ದಿನಾಂಕಃ 07.06.2021 ರಂದು ಚಾ.ಸಾ–16 ಇವರಿಂದ ಐ.ಎಂ.ವಿ ವರದಿಯನ್ನು ಪಡೆದು, ದಿನಾಂಕಃ 09.10.2021 ರಂದು ಸಿಬ್ಬಂದಿಯವರಿಂದ 65(ಬಿ) ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿನಾಂಕಃ 14.10.2021 ರಂದು ಚಾ.ಸಾ–14 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕಃ 17.01.2022 ರಂದು 1 ನೇ ಆರೋಪಿಗೆ ಸಂಬಂಧಿಸಿದ ಶಾಲಾ ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದೇನೆ. ಚಾ.ಸಾ–17 ರವರು ನನ್ನ ಅಧೀನ ಅಧಿಕಾರಿಯಾಗಿದ್ದು, ಅವರು ಈ ಪ್ರಕರಣದಲ್ಲಿ ಚಾ.ಸಾ–1 ರವರಿಂದ ದೂರನ್ನು ಸ್ವೀಕರಿಸಿಕೊಂಡು, ಗುತ್ತಲ ಪೊಲೀಸ ಠಾಣಾ ಗುನ್ನಾ ನಂಬರಃ 30/2021 ರ ಪ್ರಕಾರ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ನಾನು ಅವರ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ–6 ನೀವು ಏನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ–7 ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುತ್ತೀರಾ?

ಉತ್ತರಃ

(ಮೇಲೆ ಹೇಳಿದ ಆರೋಪಿಯ ಹೇಳಿಕೆಗಳನ್ನು ಅವರಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

ಹಾವೇರಿ. **(ಮಹಮ್ಮದ ಅನ್ವರಹುಸೇನ ಮೊಗಲಾನಿ)**

ದಿನಾಂಕಃ29. 07.2026 ***ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,***

***ಹಾವೇರಿ.***

***ಆರೋಪಿಯ ಸಹಿಃ***